**ಸಾಕ್ಷಿಯನ್ನು ದಿನಾಂಕಃ 27.09.2024 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಟಿ.ಎಮ್ ವಕೀಲರಿಂದಃ**

ನನ್ನ ಮದುವೆಯು ಪ್ರತಿವಾದಿಯ ಜೊತೆ 2007 ರಲ್ಲಿ ಆಗಿರುತ್ತದೆ, ಆದರೆ ನನಗೆ ನಿಖರವಾದ ದಿನಾಂಕ ನೆನಪಿರುವುದಿಲ್ಲ. ನಾನು ಮದುವೆಯಾದ ನಂತರ ಪ್ರತಿವಾದಿಗೆ ಮನೆಗೆ ಹೋಗಿ ಅವರ ಜೋತೆ 2007 ರಿಂದ 2018 ರವರೆಗೆ ದಾಂಪತ್ಯ ಜೀವನವನ್ನು ಮಾಡಿರುತ್ತೇನೆ. ನಾನು 2018 ನೇ ಸಾಲಿನಿಂದ ಇಲ್ಲಿಯವರೆಗೆ ನನ್ನ ತವರು ಮನೆಯಲ್ಲಿ ಇರುತ್ತೇನೆ. ನಾನು ನನ್ನ ತವರು ಮನೆಯಲ್ಲಿ ಈಗ ಐದು ವರ್ಷಗಳಿಂದ ಚೆನ್ನಾಗಿ ಇರುತ್ತೇನೆ ಎಂದರೆ ಸರಿ. ನನ್ನ ತಮರು ಮನೆಯಲ್ಲಿ ನನಗೆ ಊಟ ತಿನ್ನಲಿಕ್ಕೆ ಮತ್ತು ಬಟ್ಟೆಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಬಾಡಿಗೆ ಮನೆಯಲ್ಲಿ ನನ್ನ ತವರೂರಿನಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಬಾಡಿಗೆ ಮನೆಯಲ್ಲಿ ಇರುತ್ತೇನೆ ಎಂದು ನನ್ನ ವಾದ ಪತ್ರದಲ್ಲಿ ಬರೆದಿರುವುದಿಲ್ಲ. ನನ್ನ ಮತ್ತು ಪ್ರತಿವಾದಿಯ ದಾಂಪತ್ಯ ಜೀವನದಿಂದ ನಿರಂಜನ, ನೀಖಿತಾ ಮತ್ತು ಪ್ರತ್ವೀಕ ಎಂಬ ಮೂರು ಜನ ಮಕ್ಕಳು ಜನಿಸಿರುತ್ತಾರೆ ಎಂದರೆ ಸರಿ. ನನ್ನ ಮೂರು ಮಕ್ಕಳು ಆಗುವವರೆಗೆ ನಾನು ಪ್ರತಿವಾದಿಯ ಜೊತೆ ಚೆನ್ನಾಗಿ ದಾಂಪತ್ಯ ಜೀವನವನ್ನು ಮಾಡುತ್ತಿದ್ದೆ ಎಂದರೆ ಸರಿ.

ನನ್ನ ಅಕ್ಕಳಾದ ಅಶ್ವೀನಿ ಇವಳನ್ನು ಪ್ರತಿವಾದಿಯ ಅಣ್ಣನಾದ ರಂಗಣ್ಣ ಇವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬ ಮತ್ತು ನಮ್ಮ ಅಕ್ಕಳ ಕುಟುಂಬ ಬೇರೆ ಬೇರೆಯಾಗಿ ಇದ್ದೇವು ಎಂದರೆ ಸಾಕ್ಷಿಯು ಮೊದಲು ಒಂದಾಗಿ ಇದ್ದೇವು ಈಗ ಸುಮಾರು 08 ವರ್ಷಗಳ ಹಿಂದೆ ನಾನು ಬೇರೆ ಬೇರೆಯಾಗಿ ಇರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಅಕ್ಕಳ ಮನೆಗೆ ಹೋಗಬೇಡ ಅಂತಾ ಪ್ರತಿವಾದಿ ನನಗೆ ಹೇಳುತ್ತಿದ್ದ ಎಂದರೆ ಸರಿ. ನಾನು ಪ್ರತಿವಾದಿಯ ಮಾತು ಕೇಳದೆ ನನ್ನ ಅಕ್ಕಳ ಮನೆಗೆ ಮೇಲಿಂದ ಮೇಲೆ ಹೋಗುತ್ತಿದ್ದೆ ಎಂದರೆ ಸರಿ.

ಪ್ರತಿವಾದಿ ನನಗೆ 2018 ನೇ ಸಾಲಿನವರೆಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ನನ್ನ ಅಕ್ಕಳ ಮಾತು ಕೇಳಿಕೊಂಡು ಮೇಲಿಂದ ಮೇಲೆ ನನ್ನ ತವರು ಮನೆಗೆ ಬರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನು ನಮ್ಮ ಜಮೀನುಗಳಿಗೆ ನೀರು ಹಾಯಿಸಲು ಹೋಗಿ ಮಧ್ಯ ರಾತ್ರಿ ನೀರು ಮೋಟಾರನ್ನು ಚಾಲು ಮಾಡಿ ಬೇಳೆಗಳಿಗೆ ನೀರು ಹಾಯಿಸಿ ವೇಳೆಯಾಗಿ ಮನೆಗೆ ಬರುತ್ತಿದ್ದನು ಎಂದರೆ ಸಾಕ್ಷಿಯು ನನ್ನ ಗಂಡನ ಕುಟುಂಬದ ಎಲ್ಲ ಜಮೀನುಗಳನ್ನು ನಾವು ಪಾಲಿನ ಮೇಲೆ ಕೊಟ್ಟಿರುತ್ತೇವೆ ಆದ್ದರಿಂದ ನನ್ನ ಗಂಡನು ನೀರು ಬೀಡಲು ಹೋಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನು ನೀರು ಹಾಯಿಸಲು ಮೇಲಿಂದ ಮೇಲೆ ಜಮೀನುಗಳಿಗೆ ಹೋಗುತ್ತಿದ್ದರು ಸಹಿತ ನಮ್ಮ ಜಮೀನುಗಳನ್ನು ನಾವು ಪಾಲಿನ ಮೇಲೆ ಕೊಟ್ಟಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಯಲ್ಲಿ ಚೆನ್ನಾಗಿ ಇದ್ದಿದ್ದರಿಂದ ಪ್ರತಿವಾದಿ ನನ್ನನ್ನು ಕರೆಯಲು ತವರು ಮನೆಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಕರೆಯಲು ಬಂದರೆ ನಾನು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ.

ಇದೆ ನ್ಯಾಯಾಲಯದಲ್ಲಿ ಈ ಪ್ರಕರಣ ಚಾಲ್ತಿಯಲ್ಲಿ ಇರುವಾಗ ನಾನು ಪ್ರತಿವಾದಿಯ ಮನೆಗೆ ಹೋಗಿ ಎರಡು ತಿಂಗಳು ಪ್ರತಿವಾದಿಯ ಜೊತೆ ಬಾಳುವೆ ಮಾಡಿರುತ್ತೇನೆ ಎಂದರೆ ಸರಿ. ನಾನು ಸದರಿ ಸಮಯದಲ್ಲಿ ಪ್ರತಿವಾದಿಯ ಮನೆಯಲ್ಲಿದ್ದಾಗ ನನ್ನ ಅಕ್ಕ ಮತ್ತು ಅವಳ ಗಂಡನನ್ನು ಬಿಟ್ಟು ಪ್ರತಿವಾದಿ ಮತ್ತು ಅವನ ಸಹೋದರ ಮತ್ತು ಸಹೋದರಿಯರ ಮೇಲೆ ವರದಕ್ಷಿಣೆ ಕಿರುಕುಳ ಪ್ರಕರಣವನ್ನು ದಾಖಲ ಮಾಡಿದ್ದೇನು ಎಂದರೆ ಸರಿ, ಸಾಕ್ಷಿ ಮುಂದುವರೆದು ನನಗೆ ಸಂಬಂದಿಸಿದ ಬಿಳ್ಳಿ ಸಾಮಾನುಗಳನ್ನು ಮತ್ತು ಬಾಂಡೆ ಸಾಮಾನುಗಳನ್ನು ಹಾಗೂ 10 ತೋಲೆ ಬಂಗಾರವನ್ನು ಪ್ರತಿವಾದಿ ಮತ್ತು ಅವನ ಸಹೋದರ ಮತ್ತು ಸಹೋದರಿಯರು ತೆಗೆದುಕೊಂಡು ಹೋಗಿದ್ದರಿಂದ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿಯವರು ನನ್ನ ಸಾಮಾನುಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ತವರು ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಅಂತಾ ಯಾವತ್ತೂ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಅವನು ತನ್ನ ಸಹೋದರ ಮತ್ತು ಸಹೋದರಿಯರ ಮಾತು ಕೇಳಿಕೊಂಡು ನನಗೆ ಹೋಡಿ ಬಡಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಈ ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವಾಗ ಪ್ರತಿವಾದಿಯ ಮನೆಯಲ್ಲಿ 02 ತಿಂಗಳು ಇದ್ದಾಗ ನನಗೆ ಪ್ರತಿವಾದಿ ಹೊಡಿ ಬಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವನು ನನಗೆ ಹೊಡಿ ಬಡಿ ಮಾಡಿ ತವರು ಮನೆಗೆ ಕಳುಹಿಸಿರುತ್ತಾನೆ ಎಂದು ನುಡಿಯುತ್ತಾರೆ. ಪ್ರತಿವಾದಿ ನನಗೆ ಹೊಡಿ ಬಡಿ ಮಾಡಿರುತ್ತಾನೆ ಎಂದು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದಲ್ಲಿ ತಾನು ಹಾಜರ ಮಾಡಿದ ದಾಖಲಾತಿಗಳನ್ನು ನೋಡಿ ಸದರಿ ಅರ್ಜಿ ನಾನು ಹಾಜರ ಮಾಡಿದ ದಾಖಲಾತಿಗಳಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯನ್ನು ದಾಖಲ ಮಾಡುವ ಸಮಯದಲ್ಲಿ ನಾನು ನ್ಯಾಯಾಲಯದ ಶುಲ್ಕವನ್ನು ನನ್ನ ತವರು ಮನೆಯವರು ಕೊಟ್ಟಿದ್ದರಿಂದ ಭರಣಾ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಬಡ್ಡಿಯ ಮೇಲೆ ಸಾಲವನ್ನು ತೆಗೆದುಕೊಂಡು ನ್ಯಾಯಾಲಯದ ಶುಲ್ಕವನ್ನು ಭರಣಾ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತವರು ಮನೆಯವರು ಶ್ರಿಮಂತ ಇರುವುದರಿಂದ ನಾನು ನನ್ನ ತವರು ಮನೆಯಲ್ಲಿ ಚೆನ್ನಾಗಿ ಇರುತ್ತೇನೆ ಎಂದರೆ ಸರಿ. ನನ್ನ ತವರು ಮನೆಯವರು ನನ್ನ ಹೊಟ್ಟೆಗೆ ಮತ್ತು ಬಟ್ಟೆಗೆ ಕೊಟ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ನನ್ನ ಗಂಡ ನನ್ನ ಮನೆಯಿಂದ ಹೋರಗೆ ಹಾಕಿದ್ದರಿಂದ ನನ್ನ ತವರು ಮನೆಯವರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ ತನಗೆ ಸಂಬಂದಿಸಿದ ಜಮೀನುಗಳನ್ನು ಪಾಲಿನ ಮೇಲೆ ಕೊಟ್ಟಿದ್ದರಿಂದ ಅವನಿಗೆ ವರ್ಷಕ್ಕೆ ರೂ ಎರಡು ಲಕ್ಷ ಆಧಾಯ ಬರುತ್ತದೆ ಎಂದರೆ ಸಾಕ್ಷಿಯು ವರ್ಷಕ್ಕೆ 10 ರಿಂದ 12 ಲಕ್ಷ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ನನ್ನ ಮೂರು ಮಕ್ಕಳು ಪ್ರತಿವಾದಿಯ ಮನೆಯಲ್ಲಿ ಅವನ ಜೊತೆ ಇರುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಪ್ರತಿವಾದಿ ನನ್ನ ಮಕ್ಕಳನ್ನು ನನ್ನ ಜೋತ ಕಳುಹಿಸಿ ಕೊಡದೆ ಇದ್ದುದ್ದರಿಂದ ನನ್ನ ಮಕ್ಕಳು ಅವನ ಜೊತೆ ಇರುತ್ತವೆ ಎಂದು ನುಡಿಯುತ್ತಾರೆ. ನನ್ನ ಮೂರು ಜನ ಮಕ್ಕಳು

ಈಗ ಶಾಲೆಗೆ ಹೋಗುತ್ತಾರೆ ಮತ್ತು ಅವರ ಶಿಕ್ಷಣದ ವೆಚ್ಚವನ್ನು ಪ್ರತಿವಾದಿ ನೋಡಿಕೊಳ್ಳುತ್ತಾನೆ ಎಂದರೆ ಸಾಕ್ಷಿಯು ನನ್ನ ಮೂರು ಜನ ಮಕ್ಕಳು ಶಾಲೆಗೆ ಹೊಗುತ್ತಾರೆ ಎಂದು ನುಡಿಯುತ್ತಾರೆ. ನನ್ನ ಹಿರಿಯ ಮಗ ನಿರಂಜನ ಇವನು ಮಹಾಲಿಂಗಪುರದ ರೇಸಿಡೆನ್ಸಿಯಲ್ ಶಾಲೆಯಲ್ಲಿ ಅಭ್ಯಾಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮೂರು ಮಕ್ಕಳನ್ನು ಪ್ರತಿವಾದಿಗೆ ನೋಡಿಕೊಳ್ಳಲು ತೊಂದರೆ ಆಗುತ್ತಿದ್ದರಿಂದ ಅವರನ್ನು ಮಹಾಲಿಂಗಪುರದ ರೇಸಿಡೆನ್ಸಿಯಲ್ ಶಾಲೆಯಲ್ಲಿ ಪ್ರತಿವಾದಿ ಇಟ್ಟಿರುತ್ತಾರೆ ಎಂದರೆ ಒಬ್ಬ ಮಗನನ್ನು ಮಹಾಲಿಂಗಪುರದ ಶಾಲೆಯಲ್ಲಿ ಇಟ್ಟಿತ್ತಾರೆ ಮತ್ತು ಇನ್ನೂಳಿದ ಎರಡು ಮಕ್ಕಳು ಪ್ರತಿವಾದಿಯ ಮನೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮೂರು ಮಕ್ಕಳನ್ನು ರೇಸಿಡೆನ್ಸಿಯಲ್ ಶಾಲೆಯಲ್ಲಿ ಪ್ರತಿವಾದಿಯು ಇಟ್ಟಿದ್ದರಿಂದ ಅವನಿಗೆ ಸಾಕಷ್ಟು ಖರ್ಚು ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ ತಾನು ಒಬ್ಬನೆ ಇರುತ್ತಿದ್ದರಿಂದ ಸಾಕಷ್ಟು ತೊಂದರೆಪಟ್ಟು ನಮ್ಮ ಮಕ್ಕಳಿಗೆ ಶಾಲೆಯನ್ನು ಕಲಿಸುತ್ತಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜೋತೆ ನಮ್ಮ ಮೂರು ಜನ ಮಕ್ಕಳು ಚೆನ್ನಾಗಿ ಇರುತ್ತವೆ ಎಂದರೆ ಸರಿ.

ನನ್ನ ಮಕ್ಕಳನ್ನು ನನಗೆ ನೋಡಲು ಅನುಮತಿ ನೀಡಿ ಅಂತಾ ಬಾಗಲಕೋಟ ಪೋಲಿಸ ಠಾಣೆಯಲ್ಲಿ ನಾನು ಅರ್ಜಿಯನ್ನು ಸಲ್ಲಿಸಿದ್ದೇನು ಎಂದರೆ ಸರಿ. ನಾನು ಸದರಿ ಅರ್ಜಿಯನ್ನು ಈ ಪ್ರಕರಣ ಚಾಲ್ತಿಯಲ್ಲಿರುವಾಗ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯ ಮೊದಲು ಸಹ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ನನಗೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದರೂ ಸಹಿತ ನಾನೇ ಯಾವುದೇ ಕಾರಣ ಇಲ್ಲದೆ ಪ್ರತಿವಾದಿಯ ಜೋತೆ ಜಗಳ ಮಾಡಿ ನನ್ನ ತವರು ಮನೆಗೆ ಬಂದು ಇರುತ್ತಿದ್ದೇನೆ ಎಂದರೆ ಸಾಕ್ಷಿಯು ಅವರೇ ನನಗೆ ಹೊಡಿ ಬಡಿ ಮಾಡಿ ಮನೆಯಿಂದ ಹೋರಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನಮ್ಮ ಅಕ್ಕಳ ಮಾತು ಕೇಳಿಕೊಂಡು ಪ್ರತಿವಾದಿಯ ಜೋತೆ ಮೇಲಿಂದ ಮೇಲೆ ಜಗಳ ಮಾಡಿ ನಾನೇ ಸ್ವತಃ ನನ್ನ ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತವರು ಮನೆಯವರು ಶ್ರಿಮಂತರಿದ್ದು ಅವರು ನನ್ನನ್ನು ಚೆನ್ನಾಗಿ ನೊಡಿಕೊಳ್ಳುತ್ತಿದ್ದರು ಸಹಿತ ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತವರು ಮನೆಯವರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರಿಂದ ನನಗೆ ಯಾವುದೇ ಪೋಟಗಿ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಪೋಟಗಿ ಅವಶ್ಯಕತೆ ಇಲ್ಲದೆ ಇದ್ದರೂ ಸಹಿತ ನಾನು ಒಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ